# ಖನ್ನೂರ ವಿದ್ಯಾನಿಕೇತನ ಸ್ಕೂಲ್, ರಾಣೆಬೆನ್ನೂರ

## ಮೊದಲನೆಯ ಆವರ್ತಕ ಪರೀಕ್ಷೆ ಆಗಸ್ಟ್ -೨೦೨೦

ತರಗತಿ : ೮ ವಿಷಯ : ದ್ವಿತೀಯ ಭಾಷೆ ಕನ್ನಡ ಅಂಕಗಳು : ೨೦

**(Use KANNADA H W Note Book to ANSWER)**

ವಿಭಾಗ – ಎ (ವಾಚನ ಮತ್ತು ಗ್ರಹಿಕಾ ಕೌಶಲ): ೪ ಅಂಕಗಳು

೧) ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

"ನಾನು ವಿದೇಶಗಳಿಗೆ ಕಲಿಯಲು ಹೋಗುವುದಿಲ್ಲ; ಕಲಿಸಲು ಹೋಗುತ್ತೇನೆ" ಎಂದು ಹೇಳಿ, ಅದನ್ನು ಸಾಧಿಸಿ ತೋರಿಸಿದವರು ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರು. ಮೈಸೂರು ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ವರ್ಗವಾದಾಗ, ಅವರ ಶಿಷ್ಯರು ಅವರನ್ನು ಅಲಂಕರಿಸಿದ ಕುದುರೆಗಾಡಿಯಲ್ಲಿ ಕೂರಿಸಿ, ಕುದುರೆಯ ಬದಲು ತಾವೇ ಎಳೆದುಕೊಂಡು ಹೋಗಿ ರೈಲ್ವೆ ಸ್ಟೇಷನ್‌ಗೆ ಬಿಟ್ಟು ಬಂದರು.

ರಾಧಾಕೃಷ್ಣನ್‌ರವರ ಹುಟ್ಟೂರು ಚಿತ್ತೂರು ಜಿಲ್ಲೆಯ ಪವಿತ್ರ ಕ್ಷೇತ್ರ ತಿರುತನಿ. ಇವರು ೧೮೮೮ರ ಸೆಪ್ಟೆಂಬರ್ ೫ರಂದು ಜನಿಸಿದರು. "ಹಿರಿಯರಿಂದ ಕಿರಿಯರಿಗೆ ಬರಬಹುದಾದ ಹುಟ್ಟಿನ ಹಿರಿಮೆಯನ್ನಾಗಲೀ, ಸಂಪತ್ತಿನ ಸೊಬಗನ್ನಾಗಲೀ ನಾನು ನನ್ನ ಎಳೆತನದಲ್ಲಿ ಕಾಣಲಿಲ್ಲ. ನಾನು ನಾನಾಗಿಯೇ ಬಾಳಿದೆ, ಬೆಳೆದೆ. ದೇವರ ದಯೆಯಿಂದ ಮಾತ್ರ ಬೆಳಕು ಕಂಡೆ" ಎಂದು ಅವರು ಹೇಳಿಕೊಂಡಿದ್ದಾರೆ. ಇವರು ೧೯೫೨ರಲ್ಲಿ ಭಾರತದ ಉಪರಾಷ್ಟ್ರಪತಿಗಳಾದರು, ೧೯೬೨ರಿಂದ ಭಾರತದ ರಾಷ್ಟ್ರಪತಿಗಳಾಗಿ ಚುನಾಯಿತರಾದರು. ರಾಧಾಕೃಷ್ಣನ್ ಅವರು ಶ್ರೇಷ್ಠ ಶಿಕ್ಷಕ, ಉತ್ತಮ ಅಪರೂಪದ ತತ್ವಜ್ಞಾನಿಗಳೆನಿಸಿದ್ದರು. ಆದರ್ಶ ಶಿಕ್ಷಕರೆನಿಸಿ, ಭಾರತದ ಅತ್ಯುನ್ನತ ಹುದ್ದೆಗೇರಿದವರು. ಅವರ ಜನ್ಮದಿನವನ್ನು 'ಶಿಕ್ಷಕರದಿನ'ವನ್ನಾಗಿ ಆಚರಿಸಲಾಗುತ್ತಿದೆ.

ಪ್ರಶ್ನೆಗಳು:
- ೧) ಯಾರ ಜನ್ಮ ದಿನವನ್ನು ಶಿಕ್ಷಕರ ದಿನಾಚರಣೆಯಾಗಿ ಆಚರಿಸುವರು? ೧
- ೨) ರಾಧಾಕೃಷ್ಣನ್‌ರವರಿಗೆ ವರ್ಗವಾದಾಗ ಅವರ ಶಿಷ್ಯರು ಏನು ಮಾಡಿದರು? ೧
- ೩) ರಾಧಾಕೃಷ್ಣನ್‌ರವರು ಅಲಂಕರಿಸಿದ ಅತ್ಯುನ್ನತ ಅಧಿಕಾರ ಸ್ಥಾನವೇನು? ೧
- ೪) ರಾಧಾಕೃಷ್ಣನ್‌ರವರು ತಮ್ಮ ಬಗ್ಗೆ ಏನೆಂದು ಹೇಳಿಕೊಂಡಿದ್ದಾರೆ? ೧

ವಿಭಾಗ –ಬಿ (ಬರವಣಿಗೆಯ ಕೌಶಲ) : ೩ ಅಂಕಗಳು

೨) ನಿಮ್ಮ ಗ್ರಾಮವನ್ನು ಕೊರೋನಾದಿಂದ ರಕ್ಷಿಸಿಕೊಳ್ಳಲು ಸೂಕ್ತ ವ್ಯವಸ್ಥೆ ಮಾಡುವಂತೆ ನಿಮ್ಮ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ:

ವಿಭಾಗ – ಸಿ (ಅನ್ವಯಿಕ ವ್ಯಾಕರಣ) : ೬ ಅಂಕಗಳು

೩) ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ:

೧) ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ: ೪

೧) ಬಲ್ಲೆನೆಂದು ೨) ಊರಿಂದ ೩) ಮರವನ್ನು ೪) ಅಲ್ಲೊಬ್ಬ

೨) ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ: ೧

೧) ಹಗಲು ೨) ಮೇಲೆ

೩) ಈ ಪದಗಳ ವಚನ ಬದಲಿಸಿ ಬರೆಯಿರಿ: ೧

೧) ಶಾಲೆ ೨) ಅಂಗಡಿಗಳು

ವಿಭಾಗ – ಡಿ (ಪಠ್ಯಗಳ ಅಧ್ಯಯನ) : ೭ ಅಂಕಗಳು

೪) ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:
- ೧) ನಮ್ಮನ್ನು ಆಳುವವಳು ಯಾರು? ೧
- ೨) ಲತೆ ಯಾವುದನೆಲ್ಲಾ ನೀಡುತ್ತದೆ? ೧
- ೩) ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು? ೧

೫) ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:
- ೧) ಕನ್ನಡ ನಾಡಿನ ಪ್ರಕೃತಿ ವೈಶಿಷ್ಟ್ಯವೇನು? ೨
- ೨) ಕನ್ನಡದ ಕವಿಶ್ರೇಷ್ಠರ ಹಿರಿಮೆಯೇನು? ೨

*****

SEND THE PHOTO or PDF of this ANSWER SHEET to

HANUMANTAPPA M K Sir on 8197183534 or 8660443218